ಜಾಹೀರಾತು

ಕರ್ನಾಟಕ ಸರ್ಕಾರ

# 2018-19ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ನಿರ್ದೇಶನಾಲಯ ಸಾಧಿಸಿರುವ ಪ್ರಗತಿಯ ಪಕ್ಷಿನೋಟ

- 95 **ಮೊರಾರ್ಜಿದೇಸಾಯಿ ವಸತಿ ಶಾಲೆಗಳು**, 21 **ಪದವಿ ಪೂರ್ವ ಕಾಲೇಜುಗಳು,** 08 **ಮಾದರಿ ವಸತಿ ಶಾಲೆಗಳು** ಮತ್ತು 05 ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು **ಒಟ್ಟು 129 ವಸತಿ ಶಾಲೆ/ಕಾಲೇಜುಗಳು** ಕಾರ್ಯ ನಿರ್ವಹಿಸುತ್ತಿವೆ. ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ರೂ. 149.06 ಕೋಟಿ ಆಯವ್ಯಯ ಒದಗಿಸಲಾಗಿದ್ದು, 34290 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿರುವರು.

- **ವಿದ್ಯಾಸಿರಿ ಯೋಜನೆಯಡಿ** ವಿದ್ಯಾರ್ಥಿಗಳ ಊಟ ಮತ್ತು ವಸತಿಗಾಗಿ 20000 ಸಹಾಯಧನವನ್ನು ವಿದ್ಯಾರ್ಥಿಗಳಿಗೆ ಮಂಜೂರು ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ರೂ. 30 ಕೋಟಿ ಒದಗಿಸಲಾಗಿದೆ.

- **ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಯೋಜನೆಯಡಿ** ಐ.ಎ.ಎಸ್-85, ಕೆ.ಎ.ಎಸ್-96 ಹಾಗೂ ದ್ವಿತೀಯ ಪಿ.ಯು.ಸಿ ಓದುತ್ತಿರುವ 4678 ವಿದ್ಯಾರ್ಥಿಗಳಿಗೆ CET/NEET ಪರೀಕ್ಷಾ ಪೂರ್ವ ತರಬೇತಿ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ರೂ. 7.00 ಕೋಟಿ ಒದಗಿಸಲಾಗಿದೆ.

- **ಕ್ರೈಸ್ತ ಅಭಿವೃದ್ಧಿ ಯೋಜನೆಯಡಿ** ಸಮುದಾಯ ಭವನಗಳ ನಿರ್ಮಾಣ, ಚರ್ಚ್ ದುರಸ್ತಿ ಮತ್ತು ನವೀಕರಣ, ಬಿದಾಯಿ, ನರ್ಸಿಂಗ್, ಅನಾಥಾಶ್ರಮ/ವೃದ್ಧಾಶ್ರಮಗಳ ಮೂಲ ಸೌಕರ್ಯಗಳಿಗೆ ಮುಂತಾದ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ರೂ. 165.00 ಕೋಟಿ ಒದಗಿಸಲಾಗಿದ್ದು, 712 ಸಂಸ್ಥೆಗಳು, 4986 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿರುವರು.

- **ಸಮುದಾಯ ಭವನ ಮತ್ತು ಶಾದಿಮಹಲ್‌ಗಳ ನಿರ್ಮಾಣಕ್ಕೆ** ಪ್ರಸಕ್ತ ಸಾಲಿನಲ್ಲಿ ರೂ. 30.06 ಕೋಟಿ ಒದಗಿಸಲಾಗಿದೆ. 72 ಸಂಸ್ಥೆಗಳು ಇದರ ಪ್ರಯೋಜನ ಪಡೆದಿರುವವು.

- **270 ಮದರಸಾಗಳ ಆಧುನೀಕರಣ, ಔಪಚಾರಿಕ ಶಿಕ್ಷಣ ಹಾಗೂ ಮೂಲಭೂತ ಸೌಕರ್ಯಕ್ಕೆ** ರೂ.20 ಕೋಟಿ ವೆಚ್ಚ ಮಾಡಲಾಗಿದೆ.

- **ಜೈನ್, ಬೌದ್ಧ ಮತ್ತು ಸಿಖ್ ಸಮುದಾಯದ ಅಭಿವೃದ್ಧಿ** ಯೋಜನೆಯಡಿ ದೇವಾಲಯ (ಬಸದಿ)ಗಳ ನವೀಕರಣ, ದುರಸ್ತಿ/ ಜಿರ್ಣೋದ್ಧಾರಕ್ಕಾಗಿ ಧಾರ್ಮಿಕ ಸ್ವತ್ತುಗಳ ಸಂರಕ್ಷಣೆಗಾಗಿ ಹಾಗೂ ವಿದ್ಯಾರ್ಥಿ ವೇತನ ಕ್ಕಾಗಿ ರೂ. 14.60 ಕೋಟಿ ವೆಚ್ಚ ಮಾಡಲಾಗಿದೆ.

- **ಬಿದಾಯಿ ಯೋಜನೆಯಡಿ** ಹೆಣ್ಣು ಮಕ್ಕಳಿಗೆ/ ವಿಚ್ಛೇದಿತ ಮಹಿಳೆ ಮತ್ತು ವಿಧವೆಯರ ವಿವಾಹ ಕಾರ್ಯಕ್ರಮಕ್ಕಾಗಿ ರೂ. 50,000/-ಗಳ ಸಹಾಯ ಧನ ನೀಡಲು ರೂ. 41.25 ಕೋಟಿಗಳನ್ನು 8250 ಫಲಾನುಭವಿಗಳಿಗೆ ವಿತರಿಸಲಾಗಿದೆ.

- ಈ ಯೋಜನೆಯಡಿ **ದಿ ಬ್ಯಾರಿ ವೆಲ್‌ಫೇರ್ ಅಸೋಸಿಯೇಷನ್ ಹಾಗೂ ನದಾಫ್/ಪಿಂಜಾರ ಸಮುದಾಯದ ಸಂಸ್ಥೆಗಳಿಗೆ** ರೂ. 4.00 ಕೋಟಿ ಸಹಾಯಾನುಧನ ನೀಡಲಾಗಿದೆ.

- ರಾಜ್ಯದಲ್ಲಿ 176 ತಾಲ್ಲೂಕುಗಳಲ್ಲಿ ಅರಿವು ಮೂಡಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದ್ದು, ರೂ. 15.29 ಕೋಟಿ ವೆಚ್ಚ ಮಾಡಲಾಗಿದೆ.

- ಬೆಂಗಳೂರು ನಗರ (ಶೇಷಾದ್ರಿಪುರಂ ಮತ್ತು ಮಿಲ್ಲರ್ಸ್ ಟ್ಯಾಂಕ್ ಬೇಡ್ ರೋಡ್)ನಲ್ಲಿ **ಅಲ್ಪಸಂಖ್ಯಾತರ ಕಛೇರಿಗಳ ಸಂಕೀರ್ಣ (ಮೌಲಾನಾ ಅಜಾದ್ ಭವನ) ನಿರ್ಮಾಣ** ಮಾಡಲು ರೂ. 20.00 ಕೋಟಿಗಳನ್ನು ಒದಗಿಸಲಾಗಿದೆ.

- **ಮುಖ್ಯಮಂತ್ರಿಗಳ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಯಡಿ ಕಾಲೋನಿಗಳ ಅಭಿವೃದ್ಧಿಗಾಗಿ,** ವಿವಿಧ ಅಭಿವೃದ್ಧಿ ಕಾಮಗಾರಿಗೆ ರೂ. 400 ಕೋಟಿಗಳ ಕ್ರಿಯಾ ಯೋಜನೆ ರೂಪಿಸಿ ಜಾರಿಗೊಳಿಸಲಾಗಿದೆ.

- **ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಜನವಿಕಾಸ್ ಕಾರ್ಯಕ್ರಮ ಯೋಜನೆಯಡಿ** ಶೈಕ್ಷಣಿಕ ಕಾರ್ಯಕ್ರಮಗಳಿಗೆ ರೂ. 44.72 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.